ಆ) ಸಪದತ್ತಿ ಕ್ಷೇತ್ರದಲ್ಲಿ ಇಂತಹ ಬೇರೆ ದೈವಿವನಗಳನ್ನು ನಿರ್ಮಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಜವಳಿ ಪಾರ್ಕ್ ಪ್ರಾರಂಭಿಸುವುದು

380(4458); ಶ್ರೀ ವಿನಯ್ ಕುಲಕರ್ಣಿ (ಧಾರವಾಡ)

ಅ) ಧಾರವಾಡ ಜಿಲ್ಲೆ ಹಾಗೂ ಧಾರವಾಡದ 71 ಕ್ಷೇತ್ರದಲ್ಲಿ ಜವಳಿ ಪಾರ್ಕ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಜವಳಿ ಪಾರ್ಕ್ ಪ್ರಾರಂಭಿಸಲು ಕ್ಷೇತ್ರದಲ್ಲಿ ಸ್ಥಳ ಗುರುತಿಸಲಾಗಿದೆಯೆ, ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಪ್ರಾರಂಭಿಸಲಾಗುವುದು, ಅದಕ್ಕೆ ತಗಲುವ ವೆಚ್ಚವೆಷ್ಟು (ವಿವರ ನೀಡುವುದು)?

ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಧಾರವಾಡದಲ್ಲಿ ಜವಳಿ ಪಾರ್ಕ್ ಸ್ಥಾಪಿಸಬೇಕಾದಲ್ಲಿ ಉದ್ದಿಮೆದಾರರು ಸೇರಿ ಕಂಪನಿ ನಿಯಮಗಳನ್ವಯ ಎಸ್.ಪಿ.ವಿ ರಚಿಸಬೇಕು.

- ಎಸ್.ಪಿ.ವಿ ರಚಿಸಲು ಕನಿಷ್ಠ 5 ಉದ್ಯಮಶೀಲರನ್ನು ಹೊಂದಿರಬೇಕು.
- ಕೈಗಾರಿಕೆಗೆ ಬೇಕಾದ ಜಮೀನು ಎಸ್.ಪಿ.ವಿ ಕಂಪನಿಯ ಹೆಸರಿನಲ್ಲಿರಬೇಕು.
- ನೂತನ ಜವಳಿ ನೀತಿಯಡಿ ಜವಳಿ ಪಾರ್ಕ್ ಸ್ಥಾಪಿಸಲು ಕನಿಷ್ಠ 15 ಎಕರೆ ಕೈಗಾರಿಕಾ ಜಮೀನನ್ನು ಹೊಂದಿರಬೇಕು.

Industrialists need to be from a SPV as per company act to establish Textile Park at Dharwad.

- A minimum of 5 entrepreneurs required to from a SPV.
- Industrial land should be in the name of SPV company.
- A minimum of 15 acres of industrial land is required to establish Textile park as per New Textile Policy.

ಆ) ಜವಳಿ ಉದ್ದಿಮೆದಾರರ ಎಸ್.ಪಿ.ವಿ ಕಂಪನಿಯು ಮುಂದೆ ಬಂದು ಜವಳಿ ಪಾರ್ಕ್ ಸ್ಥಾಪಿಸಲು ವಿವರವಾದ ಯೋಜನಾ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಮಂಜೂರಾತಿ ನೀಡಲಾಗುವುದು.

- ಜವಳಿ ನೀತಿಯಡಿ, ಜವಳಿ ಪಾರ್ಕ್‌ನಲ್ಲಿ ಸಾಮಾನ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವಲಯ–1 ರಲ್ಲಿ ಸ್ಥಾಪಿಸುವ ಪಾರ್ಕ್‌ಗಳಿಗೆ ಯೋಜನಾ ಮೊತ್ತದ ಶೇ.40 ರಷ್ಟು ಅಥವಾ ಗರಿಷ್ಠ ₹ 20.00 ಕೋಟಿವರೆಗೆ ಪ್ರೋತ್ಸಾಹಧನ ನೀಡಲು ಅವಕಾಶವಿದೆ.
- ಜವಳಿ ಪಾರ್ಕ್‌ನಲ್ಲಿ ಸಾಮಾನ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವಲಯ–2 ರಲ್ಲಿ ಸ್ಥಾಪಿಸುವ ಪಾರ್ಕ್‌ಗಳಿಗೆ ಯೋಜನಾ ಮೊತ್ತದ ಶೇ.20 ರಷ್ಟು ಅಥವಾ ಗರಿಷ್ಠ ₹ 15.00 ಕೋಟಿವರೆಗೆ ಪ್ರೋತ್ಸಾಹಧನ ನೀಡಲು ಅವಕಾಶವಿದೆ.

The SPV company of Textile entrepreneurs if submitted the feasible proposal it will be examined for sanction as per the norms.

- For development of infrastructure facilities in the park 40% of the project cost or limited to ₹ 20.00 crores will be provided under Zone-1.
- For development of infrastructure facilities in the park 20% of the project cost or limited to ₹ 15.00 crores will be provided under Zone-2.

ವಿಧಾನ ಸಭಾ ಸದಸ್ಯರಾದ ಶ್ರೀ ವಿನಯ್ ಕುಲಕರ್ಣಿ (ಧಾರವಾಡ) ರವರ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 4458 ಕ್ಕೆ ಪೂರಕ ಟಿಪ್ಪಣಿ:

ಕರ್ನಾಟಕ ನೂತನ ಜವಳಿ ನೀತಿ 2013–18 ರಡಿ ಸಮಗ್ರ ಸರಣಿ ಮೌಲ್ಯ ಜವಳಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಗ್ರೀನ್ ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್‌ನ್ನು ವಲಯ–1 ಮತ್ತು ವಲಯ–2 ರಲ್ಲಿ ಸ್ಥಾಪಿಸಲು ಅವಕಾಶವಿರುತ್ತದೆ. ಆಸಕ್ತ ಜವಳಿ ಉದ್ಯಮಶೀಲರು ಕನಿಷ್ಠ 5 ಜನ ಸದಸ್ಯರ ಗುಂಪನ್ನು ರಚಿಸಿ ಕಂಪನಿ ಆಕ್ಟ್ ನಿಯಮಗಳಂತೆ ಸ್ಪೆಷಲ್ ಪರ್ಪಸ್ ವೆಹಿಕಲ್ (ಎಸ್‌ಪಿವಿ) ನ್ನೊಂದಾಯಿಸಬೇಕು. ನೂತನ ಜವಳಿ ನೀತಿ ಅನ್ವಯ ಧಾರವಾಡ ಜಿಲ್ಲೆಯು ವಲಯ–1 ರಲ್ಲಿ ಬರುತ್ತದೆ.

ನೊಂದಾಯಿತ ಎಸ್.ಪಿ.ವಿ ಕಂಪನಿ ಹೆಸರಿನಲ್ಲಿ ಕನಿಷ್ಠ 15 ಎಕರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಥವಾ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿ., ಅಥವಾ ಕೈಗಾರಿಕೆ ಜಮೀನನ್ನು ಹೊಂದಿರಬೇಕು.

ಜವಳಿ ನೀತಿಯಡಿ ಉದ್ದೇಶಿತ ಜವಳಿ ಪಾರ್ಕ್ ಸ್ಥಾಪಿಸಲು ಮುಂದೆ ಬರುವ ಎಸ್.ಪಿ.ವಿ ಕಂಪನಿಯ ಉದ್ದಿಮೆದಾರರಿಗೆ ವಲಯ–1 ರಲ್ಲಿ ಬರುವ ಪಾರ್ಕ್‌ಗಳಿಗೆ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ನಿವೇಶನ ಅಭಿವೃದ್ಧಿ & ಕಾಂಪೌಂಡ್ ನಿರ್ಮಾಣ, ರಸ್ತೆ, ಚರಂಡಿ ವ್ಯವಸ್ಥೆ, ಸಂಸ್ಕರಣ ಘಟಕ, ನೀರು ಸರಬರಾಜು, ವಿದ್ಯುತಚ್ಛಕ್ತಿ ಸೌಲಭ್ಯ, ಸಾಮಾನ್ಯ

ತ್ಯಾಜ್ಯ ವಸ್ತು ವಿಲೇವಾರಿ ಸಂಸ್ಕರಣ ಘಟಕ, ಘನ ತ್ಯಾಜ್ಯ ವಿಲೇವಾರಿ ಸೌಲಭ್ಯ, ದೂರವಾಣಿ ಸಂಪರ್ಕ, ಹೊರ ಸಂಪರ್ಕ ಕಲ್ಪಸುವ ವಿದ್ಯುತ್ ಲೈನ್, ಪಾಟರ್‌ಲೈನ್, ರಸ್ತೆ ಸಂಪರ್ಕ ಮುಂತಾದ ಮೂಲಭೂತ ಸೌಕರ್ಯಗಳಿಗೆ ಯೋಜನಾ ಮೊತ್ತದ ಶೇ.40 ರಷ್ಟು ಅಥವಾ ಗರಿಷ್ಠ ₹ 20.00 ಕೋಟಿವರೆಗೆ ಮತ್ತು ವಲಯ–2 ರಲ್ಲಿ ಸ್ಥಾಪಿಸಲ್ಪಡುವ ಜವಳಿ ಪಾರ್ಕ್‌ಗಳಿಗೆ ಯೋಜನಾ ಮೊತ್ತದ ಶೇ.20 ರಷ್ಟು ಅಥವಾ ಗರಿಷ್ಠ ₹ 15.00 ಕೋಟಿವರೆಗೆ ಪ್ರೋತ್ಸಾಹನ ನೀಡಲು ಅವಕಾಶವಿರುತ್ತದೆ.

ನೂತನ ಜವಳಿ ನೀತಿಯಡಿ ಜವಳಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದಿಮೆದಾರರಿಗೆ ವಲಯ–1 ರಲ್ಲಿ ಬರುವ ಘಟಕಗಳಿಗೆ ಸ್ಥಿರ ಬಂಡವಾಳ ಹೂಡಿಕೆ ಮೇಲೆ ಶೇ.20 ರಷ್ಟು ಗರಿಷ್ಠ ₹ 6.00 ಕೋಟಿವರೆಗೆ ಮತ್ತು ವಲಯ–2 ರಲ್ಲಿ ಬರುವ ಜವಳಿ ಘಟಕಗಳಿಗೆ ಶೇ.15 ರಷ್ಟು ಅಥವಾ ಗರಿಷ್ಠ ₹ 5.00 ಕೋಟಿವರೆಗೆ ಹೂಡಿಕೆಯ ಅರ್ಹತೆಯನ್ನು ಆಧರಿಸಿ ಸಹಾಯಧನ ನೀಡಲು ಅವಕಾಶವಿರುತ್ತದೆ. ಪ್ರೋತ್ಸಾಹಗಳ ಕಾಂಪೊನೆಂಟ್‌ನಡಿ ಸಾಲ ಆಧಾರಿತ ಬಂಡವಾಳ ಸಹಾಯಧನ, ಹೆಚ್ಚುವರಿ ಬಂಡವಾಳ ಸಹಾಯಧನ, ವಿಶೇಷ ಬಂಡವಾಳ ಸಹಾಯಧನ, ಬಡ್ಡಿ ಸಹಾಯಧನ, ವಿದ್ಯುತ್‌ಚ್ಛಕ್ತಿ ಸಹಾಯಧನ, ಪ್ರವೇಶ ತೆರಿಗೆ ಮರುಪಾವತಿ ಮತ್ತು ಮುದ್ರಾಂಕ ಶುಲ್ಕ ಮರುಪಾವತಿ ನೀಡಲು ಅವಕಾಶವಿರುತ್ತದೆ.

ವಲಯ–1 ಮತ್ತು ವಲಯ–2 ರಲ್ಲಿ ಬರುವ ಪ್ರದೇಶಗಳಲ್ಲಿ ಕನಿಷ್ಠ ₹ 100.00 ಕೋಟಿಗಿಂತ ಮೇಲ್ಪಟ್ಟು ಸ್ಥಿರ ಬಂಡವಾಳ ಹೂಡಿ 500 ಜನರಿಗೆ ನೇರ ಉದ್ಯೋಗ ಒದಗಿಸುವ ಸಿದ್ಧ ಉಡುಪು ಘಟಕಗಳನ್ನು ಮೆಗಾ ಪ್ರಾಜೆಕ್ಟ್‌ಗಳೆಂದು ಪರಿಗಣಿಸಿ ಯೋಜನಾ ಮೊತ್ತದ ಶೇ.15 ರಷ್ಟು ಅಥವಾ ಗರಿಷ್ಠ ₹ 50.00 ಕೋಟಿವರೆಗೆ, ಬಂಡವಾಳ ಸಹಾಯಧನ, ರಾಜ್ಯ ತೆರಿಗೆ/ಸುಂಕ ಪಾವತಿ ಮೇಲೆ ವಿನಾಯಿತಿ, ಕಾರ್ಮಿಕರ ವಿಮಾ ಭವಿಷ್ಯ ನಿಧಿ ವಂತಿಕೆ, ಪ್ರವೇಶ ತೆರಿಗೆ ಮರುಪಾವತಿ, ಮುದ್ರಾಂಕ ಶುಲ್ಕ ಮರುಪಾವತಿ ಮತ್ತು ವಿದ್ಯುತ್‌ಚ್ಛಕ್ತಿ ಸಹಾಯಧನವಾಗಿ ಪ್ರೋತ್ಸಾಹನ ಮತ್ತು ಉತ್ತೇಜನಗಳನ್ನು ಅರ್ಹತೆ ಆಧರಿಸಿ ನೀಡಲಾಗುವುದು.

ಸಿದ್ಧ ಉಡುಪು ಘಟಕವನ್ನು ಹೊರತುಪಡಿಸಿ ಜವಳಿ ಆಧಾರಿತ ಪ್ರಾಜೆಕ್ಟ್‌ಗಳು ₹ 100.00 ಕೋಟಿಗಿಂತ ಮೇಲ್ಪಟ್ಟು ಸ್ಥಿರ ಬಂಡವಾಳ ತೊಡಗಿಸಿ ಕನಿಷ್ಠ 150 ಜನರಿಗೆ ನೇರ ಉದ್ಯೋಗ ಒದಗಿಸುವ ಮೆಗಾ ಪ್ರಾಜೆಕ್ಟ್‌ಗಳಿಗೆ ಯೋಜನಾ ಮೊತ್ತದ ಶೇ.15 ರಷ್ಟು ಅಥವಾ ಗರಿಷ್ಠ ₹ 50.00 ಕೋಟಿವರೆಗೆ, ಬಂಡವಾಳ ಸಹಾಯಧನ, ರಾಜ್ಯ ಸುಂಕ ವಿನಾಯಿತಿ ಮರುಪಾವತಿ, ಕಾರ್ಮಿಕರ ವಿಮಾಭವಿಷ್ಯ ನಿಧಿ ವಂತಿಕೆ, ಪ್ರವೇಶ ತೆರಿಗೆ ಮರುಪಾವತಿ, ಮುದ್ರಾಂಕ ಶುಲ್ಕ ಮರುಪಾವತಿ ಮತ್ತು ವಿದ್ಯುತ್‌ಚ್ಛಕ್ತಿ ಸಹಾಯಧನವಾಗಿ ಪ್ರೋತ್ಸಾಹನ ಮತ್ತು ಉತ್ತೇಜನಗಳನ್ನು ಅರ್ಹತೆ ಆಧರಿಸಿ ನೀಡಲಾಗುವುದು.

ಸಹಿ/–

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ

ನಿರ್ದೇಶಕರು, ಕೈಮಗ್ಗ ಮತ್ತು ಜವಳಿ

ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವುದು

381(4335); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಈವರೆಗೂ ವೃದ್ಧಾಪ್ಯ ವೇತನ, ಮನಸ್ವಿನಿ, ಮೈತ್ರಿ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ಇನ್ನಿತರ ಯೋಜನೆಗಳಿಗೆ ಹಣ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಈವರೆವಿಗೂ ಹಣ ಬಿಡುಗಡೆಯಾಗದಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ಸರ್ಕಾರವು ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಲು ಕೈಗೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು).